**ದಿನಾಂಕ: 01.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಕೆ.ಎಸ್.ಎಸ್ ವಕೀಲರಿಂದ:**

1 ಮತ್ತು 2 ನೇ ವಾದಿಗಳು ಸೀಹಳ್ಳಿ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ಅದೇ ರೀತಿ 3 ಮತ್ತು 4 ನೇ ವಾದಿಗಳು ವಿವಾಹವಾಗಿ ಬೇರೆ ಊರಿನಲ್ಲಿ ವಾಸಿಸುತ್ತಿದ್ದಾರೆ. 1 ನೇ ವಾದಿಯು ವ್ಯವಸಾಯ ಮಾಡಿಕೊಂಡು ಇದ್ದಾರೆ. 1 ನೇ ವಾದಿಯು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದು ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತುಗಳ ಮೇಲೆ ನನಗೆ ಯಾವುದೇ ರೀತಿಯ ಹಕ್ಕು ಅಥವಾ ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳ ಮೇಲೆ ನಮಗೆ ಮತ್ತು ನನ್ನ ದೊಡ್ಡಪ್ಪನ ಮಕ್ಕಳಿಗೆ ಹಕ್ಕು ಇರುತ್ತದೆ. ಈ ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲಿ ನಾನು ಹಾಜರು ಇರಲಿಲ್ಲ ಮತ್ತು ವಾದಿಗಳ ವಕೀಲರಿಗೆ ನಾನು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ.

ವಾದಿಗಳು ಈ ದಾವೆಯನ್ನು ಮಾಲೀಕತ್ವ ಘೋಷಣೆ ಕೋರಿ ಸಲ್ಲಿಸಿರುತ್ತಾರೆ. ವಾದಿಗಳು ಈ ದಾವೆಯನ್ನು ಸಲ್ಲಿಸಿದ್ದ ಸಂದರ್ಭದಲ್ಲಿಯೇ ನನಗೆ ಈ ದಾವೆಯ ಎಲ್ಲಾ ವಿಚಾರಗಳು ತಿಳಿದಿರುತ್ತವೆ. ಈ ದಾವೆಯ ವಿಚಾರಗಳು ನನಗೆ ಈ ದಾವೆ ಸಲ್ಲಿಸಿದ್ದಾಗಲೇ ತಿಳಿದಿದ್ದರೂ ನಾನು ಈ ದಾವೆಯಲ್ಲಿ ಪಕ್ಷಗಾರರಾಗಿ ಸೇರಿಕೊಂಡು ತಕರಾರು ಸಲ್ಲಿಸಿ, ದಾವಾ ಅನುಸೂಚಿ ಸ್ವತ್ತುಗಳಲ್ಲಿ ನನಗೂ ಹಕ್ಕು ಇದೆ ಎಂದು ತಿಳಿಸಲು ಯಾವುದೇ ತೊಂದರೆ ಇರಲಿಲ್ಲ. ಸಾಕ್ಷಿದಾರರು ಮುಂದುವರೆದು ದಾವಾ ಅನುಸೂಚಿ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುವುದರಿಂದ ನಾನು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ.

1 ನೇ ವಾದಿಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುತ್ತವೆ ಎಂದರೆ ಸಾಕ್ಷಿದಾರರು ಕನ್ನಡ ಮಾತ್ರ ಬರುತ್ತದೆ ಎಂದು ನುಡಿಯುತ್ತಾರೆ. 1 ನೇ ವಾದಿಯು 9 ನೇ ತರಗತಿಯವರೆಗೂ ವಿಧ್ಯಾಭ್ಯಾಸ ಮಾಡಿರುತ್ತಾರೆ. ನಾನು ದ್ವಿತೀಯ ಪಿಯುಸಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಕೊತ್ತೇಗಾಲ ಗ್ರಾಮ ಪಂಚಾಯತಿಯಲ್ಲಿ ಸುಮಾರು 15 ವರ್ಷಗಳ ಕಾಲ ಅಟೆಂಡರ್ ಆಗಿ ಕೆಲಸ ಮಾಡಿ ಈಗ 8 ವರ್ಷಗಳಿಂದ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ವಾದಿಗಳ ಜೊತೆ ಶಾಮೀಲಾಗಿ ವಾದಿಗಳು ಚೆನ್ನಾಗಿದ್ದರೂ ಸಹ ದುರುದ್ದೇಶದಿಂದ ನಾನು ವಾದಿಗಳಿಂದ ಜಿ.ಪಿ.ಎ ಪಡೆದು, ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಜಿ.ಪಿ.ಎ ದಾಖಲಾತಿಯಲ್ಲಿ

ವಾದಿಗಳು ಯಾವ ಕಾರಣದಿಂದ ನನಗೆ ಜಿ.ಪಿ.ಎ ಬರೆದುಕೊಟ್ಟಿದ್ದಾರೆ ಎಂದು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿದ್ದರೇ ಸತ್ಯ ಸಂಗತಿ ನ್ಯಾಯಾಲಯಕ್ಕೆ ತಿಳಿಯುತ್ತದೆ ಎಂಬ ದುರುದ್ದೇಶದಿಂದ ನಾನು ಈ ದಾವೆಯಲ್ಲಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಗಳು ಈ ದಾವೆಯನ್ನು ಯಾವ ಆಸ್ತಿಗಳ ಸಂಖ್ಯೆಯ ಮೇಲೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿಗಳು ವಾದಪತ್ರದಲ್ಲಿ ನಮೂದಿಸಿರುವ ಆಸ್ತಿಗಳ ವಿಸ್ತೀರ್ಣ ಮತ್ತು ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ವಾದಿಗಳು ಈ ದಾವೆಯನ್ನು ಎರಡು ಆಸ್ತಿಗಳ ಮೇಲೆ ಸಲ್ಲಿಸಿರುತ್ತಾರೆ. ವಾದಿಗಳು ತಮ್ಮ ವಕೀಲರ ಮೂಲಕ ವಾದಪತ್ರವನ್ನು ತಯಾರಿಸುವಾಗ ನಾನು ಸಹ ಹಾಜರಿದ್ದೆನು. 2017 ರ ಜೂನ್ ಅಥವಾ ಜುಲೈ ನಲ್ಲಿ ವಾದಪತ್ರವನ್ನು ತಯಾರು ಮಾಡಿಸಿರುತ್ತೇವೆ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ದಾವಾ ಅನುಸೂಚಿ ಸ್ವತ್ತುಗಳಲ್ಲಿ ನಮಗೆ ಮತ್ತು ನನ್ನ ದೊಡ್ಡಪ್ಪನ ಮಕ್ಕಳಿಗೂ ಸಹ ಹಕ್ಕು ಇದೆ ಎಂಬ ವಿಚಾರವನ್ನು ಹೇಳಿ ಬರೆಸಿರುವುದಿಲ್ಲ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ವಿಚಾರಗಳನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ.

ಮಹದೇವಪ್ಪರವರು 1996 ರಲ್ಲಿ ಯಾವ ಆಸ್ತಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿದಾರರು ಮುಂದುವರೆದು 1963 ರ ಕ್ರಯಪತ್ರದ ಆಸ್ತಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. 1963 ರ ಕ್ರಯಪತ್ರ ಯಾವ ಆಸ್ತಿಗೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿಲ್ಲ. ಸದರಿ ಅಸಲು ದಾವಾ ಸಂ.223/1996 ರ ದಾವೆಯಲ್ಲಿ ಮಾನ್ಯ ನ್ಯಾಯಾಲಯವು ಮಾಲೀಕತ್ವದ ಪರಿಹಾರವನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಸಲು ದಾವಾ ಸಂ.223/1996 ರ ದಾವೆಯ ಸಂಪೂರ್ಣ ವಿಚಾರ ನನಗೆ ಗೊತ್ತಿರುವುದಿಲ್ಲ. ದಾವಾ-ಬಿ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಮಾತ್ರ ಮಹದೇವಪ್ಪರವರು ಅಸಲು ದಾವಾ ಸಂ.223/1996 ರ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಮಹದೇವಪ್ಪರವರು ಸೋಮಣ್ಣ ಮತ್ತು ಚನ್ನಬಸಪ್ಪರವರ ವಿರುದ್ಧ ಸಲ್ಲಿಸಿದ್ದರು. ಸದರಿ ಅಸಲು ದಾವಾ ಸಂ.223/1996 ರ ದಾವೆಯಲ್ಲಿ ಈ ದಾವೆಯ ಪ್ರತಿವಾದಿಗಳು ಪಕ್ಷಗಾರರಲ್ಲ ಎಂದರೆ ಸರಿ.

ವಾದಿಗಳು ಮಹದೇವಪ್ಪರವರ ವಾರಸುದಾರರು ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಅಸಲು ದಾವಾ ಸಂ.223/1996 ರ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಮಹದೇವಪ್ಪ ಮತ್ತು ಅವರ ವಾರಸುದಾರರು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

ದಾವಾ ಅನುಸೂಚಿ ಸ್ವತ್ತುಗಳಿಗೆ ಸಂಬಂಧಿಸಿದಂತೆ 2006 ರಲ್ಲಿಯೇ ತೀರ್ಮಾನವಾಗಿದ್ದರೂ ಸಹ ವಾದಿಗಳು ಪುನಃ 2017 ರಲ್ಲಿ ದಾವಾ ಅನುಸೂಚಿ ಸ್ವತ್ತುಗಳಿಗೆ ಮಾಲೀಕತ್ವ ಕೋರಿ ಸಲ್ಲಿಸಿರುವ ದಾವೆಯು ಊರ್ಜಿತವಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ.